| ನೋಂದಣಿ ಸಂಖ್ಯೆ : Registration No. : | | | | | | | | | | | |
|---|---|---|---|---|---|---|---|---|---|---|---|

**X1 – 2025**

| ವಿಷಯ ಸಂಕೇತ / Subject Code | **01 (NS)** |
|---|---|

# ಕನ್ನಡ / KANNADA

[ಸಮಯ: 3 ಗಂಟೆಗಳು] [ಒಟ್ಟು ಪ್ರಶ್ನೆಗಳ ಸಂಖ್ಯೆ : 52] [ಗರಿಷ್ಠ ಅಂಕಗಳು : 80]

[Time : 3 Hours] [Total No. of questions : 52] [Max. Marks : 80]

**ಸೂಚನೆ : "ಅ–ವಿಭಾಗ" ದಲ್ಲಿನ ಪ್ರಶ್ನೆಗಳಿಗೆ ಪ್ರಥಮವಾಗಿ ಬರೆದ ಉತ್ತರಗಳನ್ನು ಮಾತ್ರವೇ ಮೌಲ್ಯಮಾಪನದಲ್ಲಿ ಪರಿಗಣಿಸಲಾಗುವುದು.**

## ಅ – ವಿಭಾಗ

I. **(ಅ)** ಈ ಕೆಳಗಿನ ಪ್ರಶ್ನೆಗಳಿಗೆ ನೀಡಿರುವ ಉತ್ತರಗಳಲ್ಲಿ ಸರಿಯಾದುದನ್ನು ಆರಿಸಿ ಬರೆಯಿರಿ. **(10 × 1 = 10)**

1) ಮಯತನೂಜೆ ಯಾರೆಂದರೆ

(ಅ) ಸೀತೆ (ಆ) ಸಾವಿತ್ರಿ

(ಇ) ಮಂಡೋದರಿ (ಈ) ದ್ರೌಪದಿ

2) ಅನ್ಯಲಿಂಗವನ್ನು ನೆನೆಯದವರು.

(ಅ) ತೀರ್ಥಯಾತ್ರೆಗೆ ಹೋದವರು

(ಆ) ದೇವಾಲಯದಲ್ಲಿದ್ದವರು

(ಇ) ಸಾಮಾನ್ಯ ಭಕ್ತ

(ಈ) ಅಂಗದ ಮೇಲೆ ಲಿಂಗ ಧರಿಸಿದವನು

P.T.O.

3) ಹೆಂಡತಿಯ ಹರಿಬದಲಿಯೊಬ್ಬನೆ
ಗಂಡುಗೂಸೆ ವೈರಿಯನು ಕಡಿ
ಖಂಡವನು ಮಾಡುವನು ಮೇಣ್ ತನ್ನೊಡಲನಿಕ್ಕುವನು

– ಈ ಪದ್ಯಭಾಗದಲ್ಲಿ ದ್ರೌಪದಿ ಯಾವ ವಿಚಾರ ತಿಳಿಸಿದ್ದಾಳೆ?

(ಅ) ಧರ್ಮರಾಯನ ಧರ್ಮಪರತೆ

(ಆ) ಗಂಡನ ಕರ್ತವ್ಯ

(ಇ) ಕೀಚಕನಿಂದಾಗುತ್ತಿರುವ ತೊಂದರೆ

(ಈ) ವೈರಿಯ ನಡೆ

4) ದುರ್ಗಂಧ ಬಿಡದಿರುವುದು ಯಾವುದು?

(ಅ) ಊರ ಹಂದಿ (ಆ) ಜಾಲಿಯ ಮರ

(ಇ) ಊರ ನಾಯಿ (ಈ) ಕಾಡು ಹಂದಿ

5) ಹೊರಲೋಕವನ್ನು ಪರಿಚಯಿಸಿ ಎಚ್ಚರಿಕೆ ಕೊಟ್ಟವಳು ಯಾರು?

(ಅ) ಅಕ್ಕ (ಆ) ತಾಯಿ

(ಇ) ತಂಗಿ (ಈ) ಅಜ್ಜಿ

6) 'ಕಿಡ್ನಿಸ್ಟೋನ್' ಬಗ್ಗೆ ತಿಳಿಯಲು ಲೇಖಕಿ ನೇಮಿಚಂದ್ರ ಭೇಟಿ ಮಾಡಿದ್ದು.

(ಅ) ಫ್ಲೇವಿಯಾ ಮತ್ತು ಸೀತಾ

(ಆ) ನಿಶಾಶರ್ಮ ಮತ್ತು ಫ್ಲೇವಿಯಾ

(ಇ) ಕಮಲ ಮೇಡಂ ಮತ್ತು ಮುದ್ದೇಗೌಡ

(ಈ) ಸೀತಾ ಮತ್ತು ನಿಶಾಶರ್ಮ

7) "ತಾನು ಹರಿದು ಬರುವಾಗಲೆಲ್ಲಾ ತನ್ನ ಸೆರಗಂಚಿನಲ್ಲಿರುವ ತೋಟಗಳಿಂದ ಆಗ್ಗಾಗ್ಗೆ ಅಷ್ಟಿಷ್ಟು ತೆಂಗಿನಕಾಯಿ – ಸೌದೆ ಕಟ್ಟಿಗೆಗಳನ್ನು ತಂದು ಕುದುಪನ ದಿಟ್ಟಿಗೆ ಅವನ್ನೆಲ್ಲ ಬೀಳಿಸುತ್ತಿಲ್ಲವೆ!" – ಧಣಿಗಳ ಬೆಳ್ಳಿಲೋಟ ಗದ್ಯದ ಈ ಸಾಲುಗಳು ಕೆಳಗಿನ ಯಾವ ಹೇಳಿಕೆಯನ್ನು ಸಮರ್ಥಿಸುತ್ತವೆ?

(ಅ) ಚಿನ್ನಮ್ಮನ ಬೈಗುಳದಿಂದ ತಪ್ಪಿಸಿಕೊಳ್ಳಲು ಹೊಳೆಯ ಹುನ್ನಾರ

(ಆ) ವೆಂಕಪ್ಪಯ್ಯನ ಕುಟುಂಬದ ಬಗ್ಗೆ ಹೊಳೆಗೆ ಇದ್ದ ಕಾಳಜಿ

(ಇ) ಕುದುಪನ ಕುಟುಂಬದ ಬಗ್ಗೆ ಹೊಳೆಗೆ ಇದ್ದ ಅಸಹನೆ

(ಈ) ಕುದುಪನ ಕುಟುಂಬದ ಬಗ್ಗೆ ಹೊಳೆಗೆ ಇದ್ದ ಕಾಳಜಿ

8) ನಿರೂಪಕರ ಗೆಳೆಯ ಪ್ರಕಾಶ

(ಅ) ಸೈಕಾಲಜಿಸ್ಟ್ (ಆ) ಇಕಾಲಜಿಸ್ಟ್

(ಇ) ಕಾರ್ಡಿಯಾಲಜಿಸ್ಟ್ (ಈ) ಸೈಕಿಯಾಟ್ರಿಸ್ಟ್

9) "ಅಲ್ರಿ ನಾಗರಾಜ್ ಇವು ಯಾವುದಾದರೂ ತೀರ್ಮಾನ ಆಗೋ ಕೇಸುಗಳೇನ್ರಿ. ನೀವು ಬೇರೆ ಡಿಪಾರ್ಟ್‌ಮೆಂಟಿಗೆ ಬುದ್ಧಿ ಕಲಿಸ್ತೀನಿ ಅಂದ್ರಲ್ಲಾ ಹಾಗೇ ಅವರೂನು ನಿಮಗೆ ಕಲಿಸಬೇಕು ಅಂತಿರ್ತಾರೆ. ಕಲಿಯೋದಕ್ಕೆ ಯಾರಾದರೂ ತಯ್ಯಾರಿದ್ರೆ ತಾನೆ ಕೇಸು ತೀರ್ಮಾನ ಆಗೋದು" – ಹೀಗೆಂದು ನಿರೂಪಕರು ನಾಗರಾಜನಿಗೆ ಹೇಳಿದ ಮಾತಿನಲ್ಲಿ ವ್ಯಕ್ತವಾಗುವ ಭಾವ.

(ಅ) ಡಿಪಾರ್ಟ್‌ಮೆಂಟ್‌ಗಳ ಮಧ್ಯದ ಹೊಂದಾಣಿಕೆಯ ಕೊರತೆ

(ಆ) ಫಾರೆಸ್ಟ್ ಡಿಪಾರ್ಟ್‌ಮೆಂಟಿನ ಸರಿಯಾದ ಕ್ರಮ

(ಇ) ಡಿಪಾರ್ಟ್‌ಮೆಂಟ್‌ಗಳ ಮಧ್ಯದ ಹೊಂದಾಣಿಕೆ

(ಈ) ಎಲೆಕ್ಟ್ರಿಕ್ ಡಿಪಾರ್ಟ್‌ಮೆಂಟಿನ ನಿರ್ಲಕ್ಷ್ಯ

10) ನಾಗರಾಜ ಕೋವಿ ಹಿಡಿದು ಕುಳಿತಿದ್ದು ಎಲ್ಲಿ?

(ಅ) ಶಿಕಾರಿ ಗುಂಡಿ (ಆ) ಶಿಕಾರಿ ಬಂಡಿ

(ಇ) ಶಿಕಾರಿ ಗಂಡಿ (ಈ) ಶಿಕಾರಿ ಮಂಡಿ

(ಆ) ಬಿಟ್ಟ ಸ್ಥಳಗಳಿಗೆ ಆವರಣದಲ್ಲಿ ಕೊಟ್ಟಿರುವ ಉತ್ತರಗಳಲ್ಲಿ ಸೂಕ್ತವಾದುದನ್ನು ಆರಿಸಿ ಬರೆಯಿರಿ. **(5 × 1 = 5)**

(ದ್ವೀಪಜೀವಿಗಳಾಗಿ, ಮಗು, ಚಂದ್ರಭವನ, ವಾತ್ಸಾಯನ, ಚಹಾಗಿಡ, ಮುದ್ದಣ)

11) ವಾಲ್‌ಪರ್ೈಗೆ ದುರಂತದ ಮೂಲಬೀಜಗಳು ____________ ರೂಪದಲ್ಲಿ ಬಂದವು.

12) ಸ್ಥಳೀಯ ಭಾಷೆ ಕಲಿಯದ ಅನ್ಯಭಾಷಿಕರು ____________ ಉಳಿಯಬೇಕಾಗುತ್ತದೆ.

13) ಭೂಮಿಯ ಮೇಲಿನ ಮೊದಲ ವಿಜ್ಞಾನಿ ____________.

14) ಶೇಷನು ರಾಮಾಯಣದ ಕತೆಯನ್ನು ____________ನಿಗೆ ಹೇಳಿದನು.

15) ವೀರೇಂದ್ರ ಸಿಂಪಿಯವರು ಹೇಳುವ ಹಳ್ಳಿಯ ಚಹಾ ಹೋಟೇಲಿನ ಹೆಸರು ____________.

(ಇ) ಹೊಂದಿಸಿ ಬರೆಯಿರಿ. **(5 × 1 = 5)**

| | | | |
|---|---|---|---|
| 16) (ಅ) | ಪುರಂದರದಾಸ | 1) | ಕೆ.ಎಸ್. ನಿಸಾರ್ ಅಹಮದ್ |
| (ಆ) | ಬೆಳಗು ಜಾವ | 2) | ಹತ್ತಿ.....ಚಿತ್ತ.....ಮತ್ತು |
| (ಇ) | ಶಿಲುಬೆ ಏರಿದ್ದಾನೆ | 3) | ಜಿ.ಎಸ್. ಶಿವರುದ್ರಪ್ಪ |
| (ಈ) | ಚಿಟ್ಟೆ ಮತ್ತು ಜೀವಯಾನ | 4) | ಕೀರ್ತನೆ |
| (ಉ) | ಸುಕನ್ಯಾ ಮಾರುತಿ | 5) | ಮುಕ್ತಕಂಠ |
| | | 6) | ಒಮ್ಮೆ ನಗುತ್ತೇವೆ |

## ಆ – ವಿಭಾಗ

II. (ಅ) **ಯಾವುದಾದರೂ ಮೂರು** ಪ್ರಶ್ನೆಗಳಿಗೆ **ಎರಡು–ಮೂರು** ವಾಕ್ಯಗಳಲ್ಲಿ ಉತ್ತರಿಸಿ. **($3 \times 2 = 6$)**

17) ರಾವಣನು ಅಂತಿಮವಾಗಿ ಯಾವ ನಿರ್ಧಾರಕ್ಕೆ ಬರುತ್ತಾನೆ?

18) ಗಂಡರ್ರೈವರು ಮೂರುಲೋಕದ ಗಂಡರಾರು? ಹೆಸರಿಸಿ.

19) ಬಾನು ಮತ್ತು ಮರದ ನಿತ್ಯನೂತನತೆಯ ಬಗ್ಗೆ ಕವಿ ಏನು ಹೇಳಿದ್ದಾರೆ?

20) ಶಿಲುಬೆಗೇರಿಸಿದವರ ಗುಣಗಳು ಇಂದು ಯಾವ ವೇಷ ತಾಳಿವೆ?

(ಆ) **ಯಾವುದಾದರೂ ಎರಡು** ಪ್ರಶ್ನೆಗಳಿಗೆ **ಎರಡು–ಮೂರು** ವಾಕ್ಯಗಳಲ್ಲಿ ಉತ್ತರಿಸಿ. **($2 \times 2 = 4$)**

21) ಹೆಂಡ್ತಿ ಸಿದ್ಲಿಂಗಿ ಏನು ಹೇಳುತ್ತಲೇ ಇದ್ದಳು?

22) ಕನ್ನಡದ ಬಗ್ಗೆ ಮಾತಾಡಲು ನಾವು ಯೋಗ್ಯತೆ ಗಳಿಸುವುದು ಯಾವಾಗ?

23) ಕಲಾಂ ಮೇಷ್ಟ್ರು ಹೇಳಿದ ಯಶಸ್ಸಿನ ಪಂಚಾಕ್ಷರಿ ಮಂತ್ರ ಯಾವುದು?

24) ರೋಗಿಗಳ ಹಾಗೂ ಪಥ್ಯಮಾಡುವವರ ಜಿದ್ದು ಎಂತಹುದು?

(ಇ) **ಯಾವುದಾದರೂ ಮೂರು** ಪ್ರಶ್ನೆಗಳಿಗೆ **ಎರಡು–ಮೂರು** ವಾಕ್ಯಗಳಲ್ಲಿ ಉತ್ತರಿಸಿ. **(3 × 2 = 6)**

25) ಸೊರಗಿದ್ದ ಆನೆಯನ್ನು ಕೃಷ್ಣೇಗೌಡ ಹೇಗೆ ಸಾಕಿದ?

26) ದುರ್ಗಪ್ಪ ಏಕೆ ಬಂದಿರಬಹುದೆಂದು ನಿರೂಪಕರು ಯೋಚಿಸಿದರು?

27) ನಾಯನ್ನು ಕೊಲ್ಲದೆ ನೌಕರರು ಸುಳ್ಳು ಹೇಳಿರುವರೆಂದು ನಿರೂಪಕರು ಯಾವ ಸಲಹೆ ನೀಡಿದರು?

28) ಅರಣ್ಯ ಇಲಾಖೆಯವರು ನಾಗರಾಜನನ್ನು ಕುರಿತು ಏನೆಂದು ಜಾಹೀರಾತು ನೀಡಿದರು?

## ಇ – ವಿಭಾಗ

III. (ಅ) **ಯಾವುದಾದರೂ ಎರಡು** ವಾಕ್ಯಗಳ ಸಂದರ್ಭ ಸೂಚಿಸಿ, ಸ್ವಾರಸ್ಯ ಬರೆಯಿರಿ. **(2 × 3 = 6)**

29) ನೀ ತಂಪ ನನ್ನ ತವರೀಗಿ.

30) ನೂರಾರು ಜಾಹೀರಾತುಗಳು ತಲೆಗೆ ತುರುಕಿದ್ದು.

31) 'ಮಾತೇ ಮರೆತು ಹೋಗಿದೆ ಕಣೆ'.

(ಆ) **ಯಾವುದಾದರೂ ಒಂದು** ವಾಕ್ಯದ ಸಂದರ್ಭ ಸೂಚಿಸಿ, ಸ್ವಾರಸ್ಯ ಬರೆಯಿರಿ. **(1 × 3 = 3)**

32) ಹಾಡುವುದು ಅವುಗಳಿಗೆ ಅನಿವಾರ್ಯ, ಅವುಗಳ ಕರ್ಮ!

33) ಮುಂಬಯಿಯ ಪ್ರಸಿದ್ಧ ನ್ಯಾಯವಾದಿಯಾದರು.

34) ನೀರಿಳಿಯದ ಗಂಟಲೊಳ್ ಕಡುಬಂ ತುರುಕಿದಂತಾಯ್ತು.

(ಇ) **ಯಾವುದಾದರೂ ಒಂದು** ವಾಕ್ಯದ ಸಂದರ್ಭ ಸೂಚಿಸಿ, ಸ್ವಾರಸ್ಯ ಬರೆಯಿರಿ. **(1 × 3 = 3)**

35) ಡ್ರೈವರಣ್ಣ ಎತ್ಲಾಗಿ ಹೋದ ! ಇಲ್ಲೇ ಇದ್ದನಲ್ಲ !

36) ಈ ಕಂಬದೊಳ್ಗೆ ಏನೋ ಸೇರ್‌ಕೊಂಡಿದೆ.

## ಈ – ವಿಭಾಗ

IV. (ಅ) **ಯಾವುದಾದರೂ ಎರಡು** ಪ್ರಶ್ನೆಗಳಿಗೆ **ಐದಾರು** ವಾಕ್ಯಗಳಲ್ಲಿ ಉತ್ತರಿಸಿ. **(2 × 4 = 8)**

37) ರಾವಣನ ಮನಃಪರಿವರ್ತನೆಯ ಸಂದರ್ಭವನ್ನು ಕವಿ ಹೇಗೆ ನಿರೂಪಿಸಿದ್ದಾನೆ? ವಿವರಿಸಿ.

38) ಶಿವಪಥವನ್ನರಿಯದವನ ಭಕ್ತಿ ನಿರರ್ಥಕವೆಂಬುದನ್ನು ಬಸವಣ್ಣ ಯಾವ ಯಾವ ಉದಾಹರಣೆಗಳ ಮೂಲಕ ವಿವರಿಸಿದ್ದಾರೆ?

39) ದ್ರೌಪದಿ ಅವಮಾನಕ್ಕೊಳಗಾದ ಮೂರು ಪ್ರಸಂಗಗಳನ್ನು ವಿವರಿಸಿ.

40) ಇರಿಯಲ್ಬಲ್ಲೊಡೆ ವೀರನಾಗು ಧರೆಯೊಳ್ ನಾನಾ ಚಮತ್ಕಾರಮಂ।
ಅರಿಯಲ್ಬಲ್ಲೊಡೆ ಮಂತ್ರಿಯಾಗು ವಿಭುವಾಗಾರೆಂದೊಡಂ ಕೋಪಮಂ॥
ತೊರೆಯಲ್ಬಲ್ಲೊಡೆ ಯೋಗಿಯಪ್ಪುದರಿ ಷಡ್ವರ್ಗಂಗಳಂ ಗೆಲ್ವೊಡೇ।
ತೆರ ಬಲ್ಲರ್ಪೊಣೆಯಪ್ಪುದೈ ಹರಹರಾ ಶ್ರೀ ಚೆನ್ನಸೋಮೇಶ್ವರಾ॥

– ಮೇಲಿನ ಪದ್ಯಭಾಗವನ್ನು ಅರ್ಥೈಸಿಕೊಂಡು ಕೇಳಿರುವ ಎಲ್ಲಾ ಪ್ರಶ್ನೆಗಳಿಗೆ ಉತ್ತರಿಸಿ.

(ಅ) ವೀರನಾದವನು ಏನನ್ನು ಬಲ್ಲವನಾಗಿರಬೇಕು? **(1 ಅಂಕ)**

(ಆ) ಯಾರನ್ನು ಯೋಗಿ ಎನ್ನಬಹುದು? **(1 ಅಂಕ)**

(ಇ) ರಾಜ ಮತ್ತು ಮಂತ್ರಿಗಳಿಗೆ ಯಾವ ಅರ್ಹತೆಗಳಿರಬೇಕೆಂದು ಸೋಮನಾಥನು ಹೇಳಿದ್ದಾನೆ? **(2 ಅಂಕಗಳು)**

(ಆ) **ಯಾವುದಾದರೂ ಒಂದು** ಪ್ರಶ್ನೆಗೆ **ಐದಾರು** ವಾಕ್ಯಗಳಲ್ಲಿ ಉತ್ತರಿಸಿ. **($1 \times 4 = 4$)**

41) ಬಸಲಿಂಗ ತಿಮ್ಮಪ್ಪನವರ ಸೂಚನೆಗಳನ್ನು ಪಾಲಿಸದೆ ಇರಲು ಕಾರಣವೇನು? ವಿವರಿಸಿ.

42) ಚಿನ್ನಮ್ಮ ಬೆಳ್ಳಿಲೋಟವನ್ನು ಮತ್ತೆ ಹೊಳೆಗೆ ಎಸೆಯಲು ಕಾರಣವೇನು?

(ಇ) **ಯಾವುದಾದರೂ ಒಂದು** ಪ್ರಶ್ನೆಗೆ **ಐದಾರು** ವಾಕ್ಯಗಳಲ್ಲಿ ಉತ್ತರಿಸಿ. **($1 \times 4 = 4$)**

43) ಕಾಡಾನೆಗಳ ಹಾವಳಿ ನಿರೂಪಕರ ಅನುಭವಕ್ಕೆ ಬಂದುದು ಹೇಗೆ? ವಿವರಿಸಿ.

44) ಡ್ರೈವರ್ ಅಬ್ಬಾಸ್ ಮತ್ತು ಕ್ಲೀನರ್ ಕೃಷ್ಣನ ಸಾವಿಗೆ ಕೃಷ್ಣೇಗೌಡನ ಆನೆ ಕಾರಣವೇ? ವಿವರಿಸಿ.

## ಉ – ವಿಭಾಗ

## (ಭಾಷಾಭ್ಯಾಸ)

V. (ಅ) ಕೆಳಗಿನ ಪ್ರಶ್ನೆಗಳಲ್ಲಿ **ಯಾವುದಾದರೂ** **ನಾಲ್ಕು** ಪ್ರಶ್ನೆಗಳಿಗೆ ಸೂಚನೆಗೆ ಅನುಗುಣವಾಗಿ ಉತ್ತರಿಸಿ. **(4 × 2 = 8)**

45) ಎರಡು ಪದಗಳ ನಾನಾರ್ಥಗಳನ್ನು ಬರೆಯಿರಿ.

ಬಟ್ಟೆ, ಕವಿ, ಅರಿ

46) ಎರಡು ಪದಗಳ ಗುಣವಾಚಕಗಳನ್ನು ಬರೆಯಿರಿ.

ಕಲಿಭೀಮ, ಗಟ್ಟಿಪಾದ, ಶ್ರೇಷ್ಠವಿಜ್ಞಾನಿ

47) ಎರಡು ಪದಗಳ ತದ್ಭವ ರೂಪ ಬರೆಯಿರಿ.

ಯೋಗಿ, ಪರೀಕ್ಷಿಸು, ಯಶ

48) ಎರಡು ಕ್ರಿಯಾಪದಗಳ 'ಧಾತು' ಗುರುತಿಸಿ.

ಓದಿದನು, ಬೀಸುತ್ತಿತ್ತು, ಹಾಡುವಳು

49) ಎರಡು ನುಡಿಗಟ್ಟುಗಳನ್ನು ನಿಮ್ಮ ಸ್ವಂತ ವಾಕ್ಯಗಳಲ್ಲಿ ಬಳಸಿ ಬರೆಯಿರಿ.

ಕಾಲುಕೀಳು, ರಾಮಬಾಣ, ಗಾಳಿಸುದ್ದಿ

50) ಯಾವುದಾದರೂ ಎರಡು ಅನ್ಯದೇಶ್ಯ ಪದಗಳನ್ನು ಬರೆಯಿರಿ.

(ಆ) **ಯಾವುದಾದರೂ ಒಂದು** ವಿಷಯವನ್ನು ಕುರಿತು ಪ್ರಬಂಧವನ್ನು ಬರೆಯಿರಿ. **(1 × 4 = 4)**

51) ವಿದ್ಯಾರ್ಥಿ ಜೀವನದಲ್ಲಿ ಗ್ರಂಥಾಲಯದ ಮಹತ್ವ.

**ಅಥವಾ**

ವಿಶ್ವಚದುರಂಗ (ಚೆಸ್) ದಲ್ಲಿ ಭಾರತೀಯರ ಸಾಧನೆ.

(ಇ) ಇವುಗಳಲ್ಲಿ **ಯಾವುದಾದರೂ ಒಂದನ್ನು** ಕುರಿತು ಪತ್ರ ಬರೆಯಿರಿ. **(1 × 4 = 4)**

52) ಮಂಜುಳಾ/ಮಂಜೇಶ್, ದ್ವಿತೀಯ ಪಿಯುಸಿ, ಶಾರದ ಪದವಿ ಪೂರ್ವ ಕಾಲೇಜು, ಪಾವಗಡ, ತುಮಕೂರು ಜಿಲ್ಲೆ ಈ ವಿಳಾಸದಲ್ಲಿರುವವರು ನೀವೆಂದು ಭಾವಿಸಿ ನಟರಾಜ ಕುವೆಂಪು ರಸ್ತೆ, ಹಿರಿಯೂರು, ಚಿತ್ರದುರ್ಗ ಜಿಲ್ಲೆ ಈ ವಿಳಾಸದಲ್ಲಿ ವಾಸವಿರುವ ನಿಮ್ಮ ತಂದೆಗೆ ಪ್ರವಾಸಕ್ಕೆ ಅನುಮತಿ ಹಾಗೂ ಹಣ ಕೋರಿ ಪತ್ರ ಬರೆಯಿರಿ.

**ಅಥವಾ**

ಶಿವಾಂಗಿ/ಆನಂದ, ದ್ವಿತೀಯ ಪಿಯುಸಿ, ಸೆಂಟ್ ತೆರೇಸಾ ಪದವಿ ಪೂರ್ವ ಕಾಲೇಜು, ಹೂವಿನ ಹಡಗಲಿ, ವಿಜಯಪುರ ಜಿಲ್ಲೆ ಈ ಕಾಲೇಜಿನಲ್ಲಿ ಓದುತ್ತಿರುವವರು ನೀವೆಂದು ಭಾವಿಸಿ, ನಿಮ್ಮ ಸಹೋದರ/ಸಹೋದರಿಯ ವಿವಾಹದಲ್ಲಿ ಪಾಲ್ಗೊಳ್ಳಲು ನಾಲ್ಕು ದಿನದ ರಜೆಗಾಗಿ ಅನುಮತಿ ಕೋರಿ ಪ್ರಾಂಶುಪಾಲರಿಗೆ ಪತ್ರ ಬರೆಯಿರಿ.